ಅನುವಾದ ಒಳಹೊರಗು

# ಕನ್ನಡ ಭಾಷಾಂತರ ಪ್ರಕ್ರಿಯೆ ಅಂದು ಇಂದು




**ಮೋಹನ ಕುಂಟಾರ್**

ಕಲೆ: ಜಬೀವುಲ್ಲಾ ಎಂ. ಅಸದ್


ಭಾಷಾಂತರ ರೂಪುಗೊಳ್ಳುವ ವಿಧಾನವನ್ನು ಅಥವಾ ಕ್ರಮವನ್ನು ಭಾಷಾಂತರ ಪ್ರಕ್ರಿಯೆ ಎಂದು ಕರೆಯಬಹುದು. ಈ ಪ್ರಕ್ರಿಯೆಯು ಪರಿಣಾಮದಲ್ಲಿ ಭಾಷಾಂತರ ಎಂಬ ಪಠ್ಯವೊಂದನ್ನು ಲಕ್ಷ್ಯಭಾಷೆಯಲ್ಲಿ ಉತ್ಪಾದಿಸುತ್ತದೆ. ಅದು ರೂಪುಗೊಳ್ಳಲು ಇರುವ ಕಾರಣಗಳು ಹಲವು, ದೃಷ್ಟಿಕೋನಗಳು ಹಲವು. ಹಾಗಾಗಿ ಅವುಗಳ ಸ್ವರೂಪದಲ್ಲಿಯೂ ಬದಲಾವಣೆಗಳು ಆಗುತ್ತವೆ. ಮೂಲದಲ್ಲಿ ಇರುವ ಪಠ್ಯವೊಂದನ್ನು ಲಕ್ಷ್ಯಭಾಷೆಗೆ ಭಾಷಾಂತರಿಸುವಾಗ ಅದರ ಸ್ವರೂಪ ನಿರ್ಣಯಿಸುವಲ್ಲಿ ಸಂದರ್ಭ ಮತ್ತು ಉದ್ದೇಶಗಳು ಪ್ರಮುಖ ಪಾತ್ರವಹಿಸುತ್ತವೆ. ಅಂದರೆ ಭಾಷಾಂತರದ ಸಂದರ್ಭ ಮತ್ತು ಉದ್ದೇಶವೇ ಭಾಷಾಂತರದ ತಾತ್ವಿಕತೆಯ ನಿರ್ಣಾಯಕ ಘಟಕಗಳು. ಸಂದರ್ಭಾನುಸಾರ ಉದ್ದೇಶಕ್ಕೆ ಅನುಗುಣವಾಗಿ ಭಾಷಾಂತರಗಳು ನಡೆಯುತ್ತಿರುತ್ತವೆ. ಅಪ್ರಜ್ಞಾಪೂರ್ವಕವಾಗಿ ನಡೆಯುವ ಭಾಷಾಂತರಗಳಲ್ಲಿ ಪ್ರಕ್ರಿಯೆಯ ವಿಧಾನವೇ ಗಮನಕ್ಕೆ ಬರದಿರಬಹುದು. ಆದರೆ ನಿರ್ದಿಷ್ಟ ಪ್ರಕ್ರಿಯೆಯ ಮೂಲಕವೇ ಭಾಷಾಂತರಗಳು ರೂಪುಗೊಳ್ಳುತ್ತವೆ. ಭಾಷಾಂತರಗಳಲ್ಲಿ ಸಂದರ್ಭ ಮತ್ತು ಉದ್ದೇಶಗಳೇ ಮುಖ್ಯ. ಅವುಗಳನ್ನು ಅನುಸರಿಸಿದ ಪ್ರಕ್ರಿಯೆ ಉಳಿಯುತ್ತವೆ. ಅವು ಪೂರ್ಣಗೊಂಡಾಗಿನ ಉತ್ಪನ್ನಗಳ ನೆಲೆಯಿಂದ ತಾತ್ವಿಕತೆಯನ್ನು ಕಂಡುಕೊಳ್ಳುವ ಯತ್ನ ನಡೆಯುತ್ತಿರುತ್ತದೆ. ಅಂದರೆ ಭಾಷಾಂತರ ಮಾಡುವುದಕ್ಕೆ ಪ್ರಕ್ರಿಯೆಯ ಅರಿವಾಗಲಿ, ತಾತ್ವಿಕತೆಯಾಗಲಿ ತಿಳಿದಿರಬೇಕಾಗಿಲ್ಲ. ವ್ಯಾಕರಣ ನಿಯಮಗಳು ತಿಳಿಯದಿದ್ದವರೂ ಭಾಷೆಯನ್ನು ಸರಿಯಾಗಿಯೇ ಮಾತನಾಡುವಂತೆ ಭಾಷಾಂತರಗಳ ನಿಯಮಗಳು ತಿಳಿಯದೆಯಿದ್ದರೂ ಸರಿಯಾದ ಭಾಷಾಂತರಗಳನ್ನು ಮಾಡಬಹುದು. ಲಕ್ಷ್ಯಪಠ್ಯದ ಸ್ವರೂಪವನ್ನು ಆಧರಿಸಿ ಭಾಷಾಂತರ ಪ್ರಕ್ರಿಯೆ ಹಾಗೂ ಅದರ ಸ್ವರೂಪ ತಾತ್ವಿಕತೆಗಳನ್ನು ಕಂಡುಕೊಳ್ಳುವ ಪ್ರಯತ್ನ ಭಾಷಾಂತರ ಕ್ಷೇತ್ರದಲ್ಲಿ ಇತ್ತೀಚಿನ ಬೆಳವಣಿಗೆ. ಅದನ್ನು ಭಾಷಾಂತರ ಅಧ್ಯಯನ ಎಂದು ಗುರುತಿಸಿ ಪ್ರತ್ಯೇಕವಾದ ಜ್ಞಾನಶಿಸ್ತು ಎಂಬಂತೆ ಪರಿಗಣಿಸಲಾಗಿದೆ.

ಭಾಷಾಂತರಗಳು ಬಹುಭಾಷಿಕ ಪರಿಸರದಲ್ಲಿ ಸಹಜವಾದ ಒಂದು ಪ್ರಕ್ರಿಯೆ. ದೈನಂದಿನ ವ್ಯಾವಹಾರಿಕ ಬದುಕಿನಲ್ಲಿ ಹಲವು ಭಾಷಿಕರ ನಡುವೆ ಸಂವಹನ ನಡೆಯುವಾಗಲೂ ಭಾಷಾಂತರ ಪ್ರಕ್ರಿಯೆಗಳು ಸ್ವಾಭಾವಿಕವಾಗಿ ಇರುತ್ತವೆ. ಸಂವಹನವೇ ಮುಖ್ಯಲಕ್ಷ್ಯವಾಗಿ ನಡೆಯುವ ಬಹುಭಾಷಿಕರ ನಡುವಿನ ವಿಚಾರ ವಿನಿಮಯಗಳಲ್ಲಿ ಭಾಷಾಂತರ